## ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ. ಸಿ. ನಂಃ 264/2017**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಎ.ಸಿ. ದೊಡ್ಡೇಗೌಡ | **ದಿನಾಂಕ** | ಃ | **07/07/2023** |
| **ತಂದೆ ಹೆಸರು** | ಃ | ಲೇಟ್ ಚಿಕ್ಕೇಗೌಡ | **ಸಿ ಡಬ್ಲ್ಯೂ** | ಃ | **02** |
| **ವಯಸ್ಸು** | ಃ | 36 ವರ್ಷ | **ಪಿ ಡಬ್ಲ್ಯೂ** | ಃ | **03** |
| **ಉದ್ಯೋಗ** | ಃ | ಪಿ.ಸಿ. 755 | | | |
| **ವಿಳಾಸ** | ಃ | ಹೊಳೆನರಸೀಪುರ ನಗರ ಪೊಲೀಸ್ ಠಾಣೆ | | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು ಮೇ 2015 ರಿಂದ ದಿಃ12-06-2022 ರವರೆಗೆ ಕೊಣನೂರು ಪೊಲೀಸ್ ಠಾಣೆಯಲ್ಲಿ ಪಿ.ಸಿ.ಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು.

ದಿಃ 21-07-2015 ರಂದು ಬೆಳಗ್ಗೆ 11.00 ಗಂಟೆಯ ಸಮಯದಲ್ಲಿ ರಾಮನಾಥಪುರದ ನಾಗರಾಜುರವರು ಸಾರ್ವಜನಿಕರಿಗೆ ಹಣವನ್ನು ನೀಡಿ ಹೆಚ್ಚಿನ ಬಡ್ಡಿಯನ್ನು ಮತ್ತು ಮರಿಬಡ್ಡಿಯನ್ನು ವಸೂಲಿ ಮಾಡುತ್ತಿರುತ್ತಾರೆ ಎಂದು ಮಾಹಿತಿ ಬಂದ ಮೇರೆಗೆ ಸದರಿ ಸ್ಥಳಕ್ಕೆ ಹೋಗುತ್ತಿರುವಾಗ, ಚಾಸಾ-1 ರವರಿಗೆ ಯಾರೋ ಬಾತ್ಮೀದಾರರು ಕರೆ ಮಾಡಿ ಮಂಜು ಬಿನ್ ಕುಮ್ಮಣ್ಣ, ರಮೇಶ ಬಿನ್ ರಾಮಯ್ಯ, ಶಾಂತಲಕ್ಷ್ಮಿ ಕೋಂ ಶಂಕರ, ಮಹೇಶ ಬಿನ್ ಕಾಳಯ್ಯ ಇವರುಗಳು ಕೊಣನೂರು ಗ್ರಾಮದವರು. ಬಸವಾಪಟ್ಟಣ ಗ್ರಾಮದ ರವಿಕುಮಾರ್ ಬಿನ್ ಯಡಿಯೂರುಶೆಟ್ಟಿರವರುಗಳು ಸಹ ಯಾವುದೇ ಪರವಾನಗಿಯನ್ನು ಪಡೆಯದುಕೊಳ್ಳದೆ ಸಾರ್ವಜನಿಕರಿಂದ ಅಕ್ರಮವಾಗಿ ಬಾಂಡ್ ಮತ್ತು ಖಾಲಿ ಚೆಕ್ ಗಳು ಮತ್ತು ಪ್ರನೋಟ್ ಗಳನ್ನು ಪಡೆದುಕೊಂಡು ಹಣವನ್ನು ನೀಡಿ ಹೆಚ್ಚಿನ ಬಡ್ಡಿಯನ್ನು ವಸೂಲಿ ಮಾಡುತ್ತಿರುತ್ತಾರೆ ಎಂದು ಮಾಹಿತಿ ಬಂದ ಮೇರೆಗೆ ಚಾಸಾ-1 ರವರು ನನಗೆ, ಚಾಸಾ-5, ಚಾಸಾ-3 ರಿಂದ ಚಾಸಾ-6 ರವರುಗಳಿಗೆ ವಿಚಾರವನ್ನು ತಿಳಿಸಿದರು. ನಂತರ ಚಾಸಾ-7 ಮತ್ತು ಚಾಸಾ-8 ರವರುಗಳಿಗೆ ಸದರಿ ಮಾಹಿತಿಯನ್ನು ತಿಳಿಸಿ ಶೋಧನ ವಾರೆಂಟ್ ನ್ನು ಅವರಿಗೆ ತೋರಿಸಿ ಪಂಚರುಗಳನ್ನಾಗಿ ನೇಮಿಸಿಕೊಂಡು ಇಲಾಖಾ ವಾಹನ ಕೆಎ-13-ಜಿ-597 ರ ಜೀಪ್ ನಲ್ಲಿ ಮಧ್ಯಾಹ್ನ 1.10 ಗಂಟೆಯ ಸಮಯಕ್ಕೆ ಕೊಣನೂರು ಗ್ರಾಮದ ಅಂಬೇಡ್ಕರ್ ನಗರದಲ್ಲಿರುವ ಮಂಜು ಬಿನ್ ಕುಮ್ಮಣ್ಣ ಎಂಬುವವರು ಮನೆಗೆ ಹೋಗಿ, ಸದರಿಯವರಿಗೆ ಮಾಹಿತಿಯನ್ನು

ತಿಳಿಸಿ ಶೋಧನಾ ವಾರೆಂಟ್ ನ್ನು ಕೂಡ ತೋರಿಸಿ, ನೀವು ಅಕ್ರಮವಾಗಿ ಅಧಿಕ ಬಡ್ಡಿಗೆ ಹಣವನ್ನು ನೀಡುವುದಾಗಿ ಮಾಹಿತಿ ಬಂದಿದ್ದು, ಈ ಸಂಬಂಧವಾಗಿ ಯಾವುದಾದರೂ ಪರವಾನಗಿಯನು ಪಡೆದುಕೊಂಡಿರುತ್ತೀರಾ ಎಂದು ಚಾಸಾ-1 ರವರು ಕೇಳಲಾಗಿ, ನನ್ನ ಬಳಿ ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿದ ಮೇರೆಗೆ ಮನೆಯ ಮಧ್ಯದ ಹಾಲ್ ನ ಪೂರ್ವ ದಿಕ್ಕಿನ ಗೋಡೆಗೆ ಹೊಂದಿಕೊಂಡಂತೆ ಒಂದು ಕಬ್ಬಿಣದ ಬೀರು ಇದ್ದು, ಪಂಚರುಗಳ ಸಮಕ್ಷಮ ಆರೋಪಿಯಿಂದಲೇ ಸದರಿ ಬೀರುವಿನ ಬಾಗಿಲನ್ನು ತೆರೆಸಿ, ಆರೋಪಿ ತೆಗೆದುಕೊಟ್ಟಿದ್ದನ್ನು ಪಂಚರುಗಳ ಸಮಕ್ಷಮ ನೋಡಲಾಗಿ, 9 ಕೊಣನೂರು ಶಾಖೆಯ ಎಂ.ಬಿ.ಎಂ. ಬ್ಯಾಂಕ್ ನ ಖಾಲಿ ಚೆಕ್ ಗಳು, ಅವುಗಳ ಹಿಂದೆ ಬೇರೆ ಬೇರೆ ಹೆಸರುಗಳ ಸಹಿಗಳು ಇದ್ದು, ಕೆನರಾಬ್ಯಾಂಕ್ ರಾಮನಾಥಪುರ ಶಾಖೆಯ ಒಂದು ಚೆಕ್, ಅಲಹಬಾದ್ ಬ್ಯಾಂಕ್, ಹಾಸನ ಶಾಖೆಯ ಒಂದು ಚೆಕ್, ಕಾರ್ಪೊರೇಷನ್ ಬ್ಯಾಂಕ್, ಅರಕಲಗೂಡಿನ ಒಂದು ಚೆಕ್, ಕರ್ನಾಟಕ ಬ್ಯಾಂಕ್ ಅರಕಲಗೂಡಿನ ಒಂದು ಚೆಕ್, ಕಾವೇರಿ ಕಲ್ಪತರು ಬ್ಯಾಂಕ್, ಕೊಣನೂರು ಶಾಖೆಯ ಒಂದು ಚೆಕ್ ಕಾವೇರಿ ಗ್ರಾಮೀಣ ಬ್ಯಾಂಕ್ ಅರಕಲಗೂಡು ಶಾಖೆಯ ಒಂದು ಚೆಕ್ ಹಾಗೂ 4 ಖಾಲಿ ಸ್ಟಾಂಪ್ ಪೇಪರ್ ಗಳು, ಫಾರಂ ನಂ: 29 ಮತ್ತು 30 ಒಂದು, ಅದರಲ್ಲಿ ಸಹಿ ಇದ್ದಿರುತ್ತದೆ. ಹಾಗೂ 7 ಸ್ಟಾಂಪ್ ಅಂಟಿಸಿರುವ ಅನ್ ಡಿಮ್ಯಾಂಡ್ ಪ್ರಮೀಸರಿ ನೋಟ್ ಅವುಗಳ ಮೇಲೆ ವಿವಿದ ಹೆಸರುಗಳ ಸಹಿ ಇರುತ್ತದೆ. 16 ಚೆಕ್‌ಗಳು ಇರುವ ಒಂದು ಚೆಕ್ ಬುಕ್ ಅವುಗಳಲ್ಲಿ ಯಾವುದೇ ಸಹಿ ಇರಲಿಲ್ಲ. ಹಾಗೂ ವಿವಿಧ ಲೆಕ್ಕಪತ್ರಗಳನ್ನು ಬರೆದಿರುವ ಒಂದು ನೋಟಿ ಬುಕ್ ಅವುಗಳನ್ನು ಪಂಚರುಗಳ ಸಮಕ್ಷಮ ಅಮಾನತ್ತು ಪಡಿಸಿಕೊಂಡು, ನಂತರ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಪೊಲೀಸ್ ಠಾಣೆಗೆ ಬರಲಾಯಿತು. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಎಂ.ಓ-1 ರಿಂದ 28 ನ್ನು ಸಾಕ್ಷಿಯು ನೋಡಿ ಗುರುತಿಸುತ್ತಿದ್ದಾರೆ. ಮಹಜರ್ ನ್ನು ಸ್ಥಳದಲ್ಲಿ ಮಧ್ಯಾಹ್ನ 1.20 ರಿಂದ 1.40 ಗಂಟೆಯವರೆಗೆ ಜರುಗಿಸಲಾಯಿತು. ನಾನು ಚಾಸಾ-8 ರವರಿಗೆ ಈ ಪ್ರಕರಣದ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲು:ಶ್ರೀ ಎ.ಹೆಚ್.ಆರ್. ವಕೀಲರಿಂದ ಆರೋಪಿ ಪರ:

ನಾನು ಆ ದಿನ ಹಗಲು ಕರ್ತವ್ಯದಲ್ಲಿ ಇದ್ದೇನು. ನಮಗೆ ಸಾಮಾನ್ಯವಾಗಿ ಕರ್ತವ್ಯದ ಅವಧಿ ನಿಗದಿಯಾಗಿರುವುದಿಲ್ಲ. ಈ ವಿಚಾರವನ್ನು ನಾನು ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನೀವು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಳಿ ಮಾಡಲು ಹೋಗುವ ಮುಂಚೆ ಠಾಣಾ ಡೈರಿಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು

ನುಡಿದು, ಮುಂದುವರೆದು ಠಾಣಾ ಡೈರಿಯಲ್ಲಿ ನಮೂದು ಮಾಡುವ ಅಧಿಕಾರ ನಮಗೆ ಇಲ್ಲ ಎಂದು ನುಡಿಯುತ್ತಾರೆ. ಆ ದಿನ ನಾವು ಒಟ್ಟು 6 ಪ್ರಕರಣಗಳಿಗೆ ಸಂಬಂಧಪಟ್ಟಂತೆ ದಾಳಿಗೆ ಹೋಗಿರುತ್ತೇವೆ.

ನಾವು ಆ ದಿನ ಬೆಳಗ್ಗೆ 11.00 ಗಂಟೆಗೆ ದಾಳಿ ಮಾಡಲು ಪ್ರಾರಂಭಿಸಿರುತ್ತೇವೆ. ಆರೋಪಿ ಅಕ್ರಮವಾಗಿ ಬಡ್ಡಿ ವ್ಯವಹಾರ ಮಾಡುತ್ತಿದ್ದಾರೆ ಎಂದು ನಮಗೆ ಬೆಳಗ್ಗೆ 11.00 ಗಂಟೆಗೆ ಮಾಹಿತಿ ಬಂದಿರುತ್ತದೆ. ನಮಗೆ ಮಾಹಿತಿ ಬಂತು ಎನ್ನಲಾದ ಸಮಯದಲ್ಲಿ ನಾವು ನಾಗರಾಜುರವರ ಮನೆಗೆ ದಾಳಿ ನಡೆಸಲು ಹೋಗುತ್ತಿದ್ದೆವು. ಮಾಹಿತಿ ಬಂದ ನಂತರ ನಾವು ನಾಗರಾಜುರವರ ಮನೆಗೆ ಹೋದೆವು. ನಾಗರಾಜುರವರ ಮನೆಯಲ್ಲಿ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ದಾಳಿ ಮಾಡಲಾಯಿತು ಎನ್ನುವುದು ನನಗೆ ನೆನಪಿಲ್ಲ. ನಾಗರಾಜುರವರ ಮನೆಯಲ್ಲಿ ದಾಳಿ ಮಾಡಿ ಎಷ್ಟು ಗಂಟೆಗೆ ಅಲ್ಲಿಂದ ಹೊರಟಿರುತ್ತೇವೆ ಎಂದು ನನಗೆ ನೆನಪಿಲ್ಲ.

ನಾವು ನಾಗರಾಜುರವರ ಮನೆಯಿಂದ ನಾಗರಾಜುವರವನ್ನು ವಶಕ್ಕೆ ಪಡೆದುಕೊಂಡು ಅವರನ್ನು ಠಾಣೆಗೆ ಕರೆದುಕೊಂಡು ಬಂದು ಚಾಸಾ-1 ರವರು ಚಾಸಾ-23 ರವರಿಗೆ ವರದಿಯನು ನೀಡಿ ನಂತರ ನಾವು ಆರೋಪಿಯ ಮನೆಗೆ ದಾಳಿ ಮಾಡಲು ಹೋಗಿರುತ್ತೇವೆ. ಈ ವಿಚಾರವನ್ನು ನಾನು ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನಮ್ಮ ಠಾಣೆಯಿಂದ ಪಶ್ಚಿಮ ದಿಕ್ಕಿಗೆ ಆರೋಪಿಯ ಮನೆ ಬರುತ್ತದೆ. ನಾವು ನಾಗರಾಜುರವರ ಮನೆಯಿಂದ ಠಾಣೆಗೆ ಬಂದು ವಾಪಸ್ಸು ಠಾಣೆಯಿಂದ ಹೊರಡುವುದು ಮಧ್ಯಾಹ್ನ 1.00 ಗಂಟೆಯ ಸಮಯವಾಗಿತ್ತು. ನಾನು ನನ್ನ ಹೇಳಿಕೆಯಲ್ಲಿ ಠಾಣೆಯನ್ನು ಬಿಡುವುದು 1.00 ಗಂಟೆಯಾಗಿತ್ತು ಎಂದು ಹೇಳಿರುವುದಿಲ್ಲ.

ಶೋಧನಾ ವಾರೆಂಟ್ ಲಿಖಿತವಾಗಿ ಇತ್ತು. ಆರೋಪಿಯ ಮನೆ ಠಾಣೆಯಿಂದ ಸುಮಾರು 1 ಕಿ.ಮಿ.ಯದೂರದಲ್ಲಿ ಇರುತ್ತದೆ. ಆರೋಪಿಯ ಮನೆಯ ಅಕ್ಕಪಕ್ಕ ತುಂಬಾ ಮನೆಗಳು ಇರುತ್ತವೆ ಎಂದರೆ ಸರಿ. ನಾವು ಆರೋಪಿಯ ಮನೆಗೆ ಹೋಗಿರುತ್ತೇವೆ ಎನ್ನಲಾದ ಸಮಯದಲ್ಲಿ ಆರೋಪಿಯ ಮನೆಯ ಬಾಗಿಲು ತೆರೆದಿತ್ತು. ಈ ವಿಚಾರವನ್ನು ಕೂಡ ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಆರೋಪಿಯ ಮನೆಯ ಬಾಗಿಲು ದಕ್ಷಿಣ ದಿಕ್ಕಿಗೆ ಇರುತ್ತದೆ. ಈ ವಿಚಾರವನ್ನು ಕೂಡ ನಾನು ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಆರೋಪಿಯ ಮನೆಗೆ ಹೋದಾಗ ಆರೋಪಿ, ಆರೋಪಿಯ ತಾಯಿ ಮತ್ತು ಇನ್ನೊಬ್ಬ ಮಹಿಳೆ ಇದ್ದರು. ಸದರಿ ವಿಚಾರವನ್ನು ಕೂಡ ನಾನು ಹೇಳಿಕೆಯಲ್ಲಿಹೇಳಿರುವುದಿಲ್ಲ.

ಆರೋಪಿಯ ಮನೆ ಹಂಚಿನ ಮನೆಯಾಗಿರುತ್ತದೆ. ಸದರಿ ವಿಚಾರವನು ಕೂಡ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಆರೋಪಿಯ ಮನೆಯಲ್ಲಿ ಎಷ್ಟು ರೂಂಗಳು ಇರುತ್ತದೆ ಎಂದು ಗೊತ್ತಿಲ್ಲ. ಆದರೆ ಒಂದು ಹಾಲ್ ಇರುತ್ತದೆ. ಆರೋಪಿಯ ಮನೆಯಲ್ಲಿ ಇತ್ತು ಎನ್ನಲಾದ ಬೀರು ಸಿಮೆಂಟ್ ಬಣ್ಣದ್ದು, ಸದರಿ ವಿಚಾರವನ್ನು ಕೂಡ ನಾನು

ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನಾನು ಮತ್ತು ನನ್ನ ಅಧಿಕಾರಿಗಳು ಆರೋಪಿಯಮನೆಯ ಅಕ್ಕಪಕ್ಕದ ಮನೆಯವನ್ನು ವಿಚಾರ ಮಾಡಿರುತ್ತೇವೆ. ಸದರಿ ವಿಚಾರವನ್ನು ಕೂಡ ನಾನು ಹೇಳಿಕೆಯಲ್ಲಿಹೇಳಿರುವುದಿಲ್ಲ.

ಆರೋಪಿಯ ಮನೆಯಲ್ಲಿ ಇತ್ತು ಎನ್ನಲಾದ ಬೀರುವಿನಿಂದ ಮುದ್ದೆ ಮಾಲನ್ನು ವಶಪಡಿಸಿಕೊಳ್ಳಲಾಗಿದೆ ಎನ್ನುವ ಸಂದರ್ಭದಲ್ಲಿ ಅಡಿಯೋ ಅಥವಾ ವಿಡಿಯೋ ರೆಕಾರ್ಡ್ ಮಾಡಿರುವುದಿಲ್ಲ. ಆ ದಿನ ನನ್ನ ಮೇಲಾಧಿಕಾರಿಗಳನ್ನು ಒಳಗೊಂಡಂತೆ ನಾವು 6 ಜನ ಹೋಗಿರುತ್ತೇವೆ. ಆರೋಪಿಯ ಮನೆಯಿಂದ ಮುದ್ದೆ ಮಾಲನ್ನು ವಶಪಸಿಡಿಕೊಳ್ಳಲಾಯಿತು ಎನ್ನಲಾದ ಸಮಯದಲ್ಲಿ ವಿಡಿಯೋ ರೆಕಾರ್ಡ್ ಮಾಡಲು ಯಾವುದೇ ತೊಂದರೆ ಇರಲಿಲ್ಲ, ಸಾಕ್ಷಿಯು ಮುಂದುವರೆದು ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಎಂ.ಓ-1 ರಿಂದ 28 ಆರೋಪಿಗೆ ಸಂಬಂಧಪಟ್ಟಿದ್ದಲ್ಲ ಮತ್ತು ಅವುಗಳನ್ನು ಆರೋಪಿಯ ಮನೆಯಿಂದ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಎಂ.ಓ-1 ರಿಂದ 28 ನ್ನು ವಶಪಸಿಡಿಕೊಂಡಿದ್ದೆ ಅದರಲ್ಲಿ ಆಡಿಯೋ ಅಥವಾ ವಿಡಿಯೋ ರೆಕಾರ್ಡ್ ಮಾಡುತ್ತಿದಿದಃರಿ ಆದ್ದರಿಂದ ನೀವು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿರಿ ಎಂದರೆ ಸಾಕ್ಷಿಯ ಸರಿಯಲ್ಲ ಎಂದು ನುಡಿಯತ್ತಾರೆ. ಆರೋಪಿಯ ಮನೆಯ ಅಕ್ಕಪಕ್ಕದವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ಆರೋಪಿ ಹೆಚ್ಚಿನ ಬಡ್ಡಿ ಮತ್ತು ಮರಿಬಡ್ಡಿಯನ್ನು ಪಡೆದುಕೊಳ್ಳುತ್ತಿದ್ದರು ಎನ್ನುವುದಕ್ಕೆ ಸಂಬಂಧಪಟ್ಟಂತೆ ನಾವು ಅಕ್ಕಪಕ್ಕದ ಮನೆಯವರನ್ನು ವಿಚಾರ ಮಾಡಿರುವುದಿಲ್ಲ. ನನ್ನ ಮೇಲಾಧಿಕಾರಿಯವರು ಈ ಬಗ್ಗೆ ವಿಚಾರ ಮಾಡಿರುತ್ತಾರೆ. ಈ ವಿಚಾರದ ಬಗ್ಗೆ ಅಕ್ಕಪಕ್ಕದರವನ್ನು ವಿಚಾರ ಮಾಡಿರುವುದಾಗಿ ನನ್ನ ಮೇಲಾಧಿಕಾರಿ ನನಗೆ ಹೇಳಿರುವುದಿಲ್ಲ.

ಆರೋಪಿ ಕೂಲಿ ಕಾರ್ಮಿಕ ಮತ್ತು ಪ್ರತಿದಿನ ಗಾರೆ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಹಣಕಾಸಿನಲ್ಲಿ ಸ್ಥಿತಿವಂತರಲ್ಲ ಎಂದರೆ ಸರಿಯಲ್ಲ. ಆರೋಪಿ ಅಕ್ರಮ ಬಡ್ಡಿ ವ್ಯವಹಾರ ಮಾಡುತ್ತಿದ್ದರೆ ಎಂದು ಖಾಸಗಿ ವ್ಯಕ್ತಿಗಳು ಬಂದು ನಿಮಗಾಗಲೀ ನಿಮ್ಮ ಮೇಲಾಧಿಕಾರಿಗಾಗಲಿ ಎಂದು ದೂರು ಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಎಂ.ಓ-1 ರಿಂದ 28 ಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ಆ ದಿನ ನನಗಾಲೀ ಅಥವಾ ನನ್ನ ಮೇಲಾಧಿಕಾಯವರಿಗಾಗಲಿ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ಚಾಸಾ-1 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ಈ ಪ್ರಕರಣ ದಾಖಲಾದ ಸಂರ್ಭದಲ್ಲಿ ರೈತ ಆತ್ಮ ಹತ್ಯೆ ಜಾಸ್ತಿ ಇದ್ದುದ್ದರಿಂದ ಪೊಲೀಸ್ ವರೀಷ್ಟಾಧಿಕಾರಿಯವರಿಂದ ನಮಗೆ ಒತ್ತಡ ಇತ್ತು ಎಂದರೆ ಸರಿಯಲ್ಲ. ಇಲಾಖಾ ಅಂಕಿಅಂಶಗಳಿಗೋಸ್ಕರ

ನಾನು ನನ್ನ ಮೇಲಾಧಿಕಾರಿಯವರ ಮಾತನ್ನುಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ನ್ನು ಸ್ಥಳದಲ್ಲಿ ಲ್ಯಾಪ್ ಟಾಪ್ ನಿಂದ ಟೈಪ್ ಮಾಡಲಾಯಿತು. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಮಹಜರ್ ನ್ನು ಸ್ಥಳದಲ್ಲಿ ಪ್ರಿಂಟ್ ಮಾಡಲಾಗಿದೆ. ನಾವು ಸ್ಥಳಕ್ಕೆ ಪ್ರಿಂಟರ್ ನ್ನು ತೆಗೆದುಕೊಂಡು ಹೋಗಿದ್ದೇವು. ನಾವು ಮಹಜರ್ ನ್ನು ಸ್ಥಳದಲ್ಲಿಯೇ ಪ್ರಿಂಟ್ ಮಾಡಿರುವ ವಿಚಾರವನ್ನು ಮತ್ತು ಪ್ರಿಂಟರ್ ನ್ನು ಆರೋಪಿಯ ಮನೆಗೆ ತೆಗೆದುಕೊಂಡು ಹೋಗಿದ್ದ ವಿಚಾರವನ್ನು ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಆರೋಪಿ ತಾನು ಹಣಕಾಸಿನಲ್ಲಿ ಸ್ಥಿತಿವಂತ ಎಂಬುದಾಗಿ ಹೇಳಿ ಕೊಟ್ಟಿಲ್ಲ ಮತ್ತು ನಾವು ಆರೋಪಿಯಿಂದ ಒತ್ತಾಯ ಪೂರ್ವಕವಾಗಿ ಖಾಲಿ ಹಾಳೆಗೆ ಸಹಿಯನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ತಾಯಿಯನ್ನು ಈ ಪ್ರಕರಣದಲ್ಲಿ ಸಾಕ್ಷಿಯನ್ನಾಗಿ ಮಾಡಿರುವುದಿಲ್ಲ. ಆರೋಪಿಯ ತಾಯಿಯನ್ನು ಈ ಪ್ರಕರದಲ್ಲಿ ಆರೋಪಿಯನ್ನಾಗಿ ಮಾಡಲು ಏನಾದರೂ ತೊಂದರೆ ಇತ್ತಾ ಎಂದರೆ, ಸಾಕ್ಷಿಯು ಅವರಿಗೆ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ತಾಯಿಯಿಂದ ಯಾವುದೇ ಹೇೞಿಕೆಯನ್ನು ಪಡೆದುಕೊಂಡಿಲ್ಲ. ಸಾಕ್ಷಿಯು ಮುಂದುವರೆದು ಹೇಳಿಕೆಯನ್ನು ತೆಗೆದುಕೊಳ್ಳುವುದು ಬಿಡುವುದು ತನಿಖಾಧಿಕಾರಿಯವರ ವಿವೇಚನೆಗೆ ಬಿಟ್ಟ ವಿಚಾರ ಎಂದು ನುಡಿಯುತ್ತಾರೆ. ನಾನಗಲೀ ನನ್ನ ಮೇಲಾಧಿಕಾರಿಯವರಾಗಲಿ ಆರೋಪಿಯ ಮನೆಗೆ ಹೋಗಿರುವುದಿಲ್ಲ ಮತ್ತು ಅಲ್ಲಿಂದ ಎಂ.ಓ-1 ರಿಂದ 28 ನ್ನು ವಶಪಡಿಸಿಕೊಂಡಿರುವುದಿಲ್ಲ ನಮ್ಮ ಇಲಾಖಾ ಅಂವಕಿ ಅಂಶಗಳಿಗೋಸ್ಕರ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ರೀತಿ ಬಡ್ಡಿ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ.**

(ಶ್ರೀಮತಿ ಚೇತನಾ )
**ಅಧಿಕ ಜೆಎಂಎಫ್‌ಸಿ, ಅರಕಲಗೂಡು.**